# ನಿಮ್ಮೊಡನೆ

## ಜಾತ್ರೆಗಳ ಬಯಲಿನಲ್ಲಿ ಸಾಮರಸ್ಯದ ಬಣ್ಣಗಳು ಉತ್ಸವದ ಸೌಹಾರ್ದ–ವಿವೇಕ ಬದುಕಿಗೂ ಬರಲಿ

ಜನವರಿ ತಿಂಗಳ ಜೊತೆಗೆ ಜಾತ್ರೆಗಳ ಸಂಭ್ರಮವೂ ಶುರುವಾಗುತ್ತದೆ. ನಾಡಿನ ವಿವಿಧ ಭಾಗಗಳಲ್ಲಿನ ಜಾತ್ರೆಗಳು ಲಕ್ಷಾಂತರ ಭಕ್ತರ ಶ್ರದ್ಧೆ ಮತ್ತು ಭಕ್ತಿಯ ಅಭಿವ್ಯಕ್ತಿಯ ರೂಪದಲ್ಲಿ ಗಮನಸೆಳೆಯುತ್ತವೆ. ಐದಾರು ಲಕ್ಷ ಜನ ನೆರೆಯುವ, ಅಷ್ಟೂ ಜನರಿಗೆ ಊಟೋಪಚಾರ ನೀಡುವ ಕಾರಣದಿಂದಾಗಿ ಗಮನಸೆಳೆಯುವ ಜಾತ್ರೆಗಳೂ ಇವೆ. ಸುತ್ತಮುತ್ತಲ ಊರುಗಳಿಗೆ ಸೀಮಿತವಾಗಿರುವ ಜಾತ್ರೆಗಳಿರುವಂತೆ, ನಾಡು ಹೊರನಾಡುಗಳ ಗಮನವನ್ನು ಸೆಳೆಯುವ ಬೃಹತ್ ಜಾತ್ರೆಗಳೂ ಇವೆ. 'ಜನ ಮರುಳೋ ಜಾತ್ರೆ ಮರುಳೋ' ಎನ್ನುವ ಮಾತು, ಮರುಳುತನಕ್ಕಿಂತಲೂ ಜಾತ್ರೆಗಳ ಆಕರ್ಷಣೆಯನ್ನು ಸೂಚಿಸುವ ನಿಟ್ಟಿನಲ್ಲಿ ಮುಖ್ಯವಾದುದಾಗಿದೆ.

ಜನರ ಭಾಗವಹಿಸುವಿಕೆಯಿಂದಾಗಿ ವ್ಯಾಪಾರ ವಹಿವಾಟಿನ ರೂಪವನ್ನೂ ಪಡೆದಿರುವ ಜಾತ್ರೆಗಳು, ಸಾಂಸ್ಕೃತಿಕ ಚಟುವಟಿಕೆಗಳಿಗೆ ಒತ್ತಾಸೆಯೂ ಆಗಿವೆ. (ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವ ಸಾಹಿತ್ಯ ಸಮ್ಮೇಳನವೂ ಜಾತ್ರೆಯ ಸ್ವರೂಪ ಪಡೆದುಕೊಂಡಿದೆ ಹಾಗೂ ಆ ಜಾತ್ರೆ ಸಾಹಿತ್ಯೇತರ ಕಾರಣದಿಂದಲೇ ಹೆಚ್ಚು ಸುದ್ದಿಯಾಗುತ್ತದೆ.) ಜನರ ಜೊತೆಗೆ ದನಗಳ ಜಾತ್ರೆಗಳೂ ನಡೆಯುತ್ತವೆ. ಭಕ್ತಿಯ ಪ್ರದರ್ಶನದೊಂದಿಗೆ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ವಸ್ತುಗಳು ಹಾಗೂ ಹೊಸ ಆವಿಷ್ಕಾರಗಳ ಪ್ರದರ್ಶನಕ್ಕೂ ಕೆಲವು ಜಾತ್ರೆಗಳು ವೇದಿಕೆಗಳಾಗಿವೆ. ನಗರಗಳೆಲ್ಲ ನಿತ್ಯ ಜಾತ್ರೆಯ ಸ್ವರೂಪವನ್ನು ಪಡೆದುಕೊಂಡು, ರಟ್ಟೆ ಗಟ್ಟಿಯುಳ್ಳ ಗ್ರಾಮೀಣರು ನಗರಗಳ ದಾರಿ ಹಿಡಿದಿರುವ ಸಂದರ್ಭದಲ್ಲೂ ಜಾತ್ರೆಗಳ ಹುಮ್ಮಸ್ಸು ಕಡಿಮೆಯಾಗಿಲ್ಲ. ಉತ್ಸವಗಳ ಕೇಂದ್ರದಲ್ಲಿರುವ ಧಾರ್ಮಿಕ ಸಂಗತಿಗಳು, ಜಾತ್ರೆಗಳ ಮಹತ್ವ ಕಡಿಮೆಯಾಗದಿರುವುದಕ್ಕೆ ಕಾರಣವಾಗಿರುವಂತೆಯೇ, ಜಾತ್ರೆಗಳು ಜನಸಾಮಾನ್ಯರ ಮನರಂಜನೆ ಹಾಗೂ ಮನೋವಿಕಾಸದ ಸಾಧ್ಯತೆಗಳೂ ಆಗಿರುವುದನ್ನು ಗಮನಿಸಬೇಕು. ವಾರ್ಷಿಕ ಉತ್ಸವಗಳು ಒಂದು ಪ್ರದೇಶದ ಜನರನ್ನು ತಂತಮ್ಮ ಊರು–ಕೇರಿಗಳೊಂದಿಗಿನ ಸಂಬಂಧವನ್ನು ನೆನಪಿಸಿಕೊಳ್ಳುವ, ನವೀಕರಿಸಿಕೊಳ್ಳುವ ಸಂದರ್ಭಗಳೂ ಆಗಿವೆ. ನಿರ್ದಿಷ್ಟ ಧರ್ಮದ ಆಚರಣೆಗಳ ನಡುವೆಯೂ, ಒಟ್ಟಾರೆ ಜಾತ್ರೆಯ ಸ್ವರೂಪದಲ್ಲಿ ಧರ್ಮಾತೀತ ಸ್ವರೂಪವೊಂದು ಉಸಿರಾಡುತ್ತಿರುವ ಉದಾಹರಣೆಗಳು ನಾಡಿನಲ್ಲಿ ಸಾಕಷ್ಟಿವೆ.

ಜನಪದ ಕಲಾಪ್ರಕಾರಗಳು, ರಂಗಭೂಮಿ, ಕ್ರೀಡಾಪ್ರತಿಭೆಗಳನ್ನು ಗುರ್ತಿಸಿ ಬೆಳೆಸುವ ದೃಷ್ಟಿಯಿಂದಲೂ ಜಾತ್ರೆಗಳಿಗೆ ವಿಶೇಷ ಮಹತ್ವವಿದೆ. ಒಂದು ಕಾಲದಲ್ಲಿ ಜನರಲ್ಲಿ ಕನಸುಗಳನ್ನು ಬಿತ್ತುವ ಕೆಲಸ ಮಾಡುತ್ತಿದ್ದ ಉತ್ಸವಗಳು, ಈಗಲೂ ತಮ್ಮ ಬಣ್ಣಗಳನ್ನು ಕಳೆದುಕೊಂಡಿಲ್ಲ.

ಬಹುತೇಕ ಜಾತ್ರೆಗಳು ನಾಡಿನ ಸಾಂಸ್ಕೃತಿಕ ವೈವಿಧ್ಯ ಹಾಗೂ ಸಾಮಾಜಿಕ ಬಹುತ್ವದ ಸಂಕೇತಗಳೂ ಆಗಿವೆ. ಭಾರತದ ವೈವಿಧ್ಯ ಹಾಗೂ ಜನಸಾಮಾನ್ಯರ ಬದುಕಿನ ಸೊಗಸಿನ ಅಧ್ಯಯನಕ್ಕೆ ಜಾತ್ರೆಗಳು ಅಪೂರ್ವ ಅವಕಾಶಗಳಾಗಿವೆ. ಸದ್ಯದ ಸಂದರ್ಭ ವಿಭಜಕ ರಾಜಕಾರಣದ ಪ್ರಯೋಗಶಾಲೆ ಎನ್ನುವಂತಾಗಿರುವ ಹೊತ್ತಿನಲ್ಲಿ ಜಾತ್ರೆಗಳ ಸಾಧ್ಯತೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಜನರ ನಡುವೆ, ಸಮುದಾಯಗಳ ನಡುವೆ ಬಿರುಕುಗಳು ಉಂಟಾಗುತ್ತಿವೆ, ಅಸಹನೆ ಹೆಚ್ಚುತ್ತಿದೆ. ಈ ಒಡಕುಗಳಿಗೆ, ಅಸಹನೆಗೆ ಜಾತ್ರೆಗಳು ಔಷಧಿಯ ರೂಪದಲ್ಲಿ ಪರಿಣಮಿಸಬಹುದೆ?

ಲಕ್ಷಾಂತರ ಜನ ನೆರೆಯುವ ಜಾತ್ರೆಗಳು ಎಲ್ಲ ಸಮುದಾಯಗಳ ಸಹಭಾಗಿತ್ವದಿಂದ ಕಳೆಗಟ್ಟುತ್ತವೆ. ಈ ಸಹಭಾಗಿತ್ವ ಜಾತ್ರೆಯ ಸಂದರ್ಭಕ್ಕಷ್ಟೇ ಏಕೆ ಸೀಮಿತವಾಗಬೇಕು? ಅನ್ನ ಹಾಗೂ ಜ್ಞಾನ ದಾಸೋಹದೊಂದಿಗೆ ತಮ್ಮನ್ನು ಗುರ್ತಿಸಿಕೊಳ್ಳುವ ಮಠಗಳು, ಜಾತ್ರೆಯ ಸಂದರ್ಭದಲ್ಲಿ ರೂಪುಗೊಳ್ಳುವ ಸಾಮಾಜಿಕ ಸೌಹಾರ್ದವನ್ನು ನಂತರದ ದಿನಗಳಲ್ಲೂ ಮುಂದುವರೆಸುವ ನಿಟ್ಟಿನಲ್ಲಿ ಏಕೆ ಪ್ರಯತ್ನಗಳನ್ನು ನಡೆಸಬಾರದು? ಪರಿಷೆಯ ಉದ್ದೇಶವೇ ಜನರನ್ನು ಒಂದುಗೂಡಿಸುವುದು ಆಗಿರುವಾಗ, ಆ ಪ್ರಯತ್ನ ವರ್ಷಪೂರ್ತಿ ಮುಂದುವರೆಯಬಾರದೇಕೆ? ಇದರರ್ಥ, ವರ್ಷಪೂರ್ತಿ ಜಾತ್ರೆ ನಡೆಯಬೇಕೆಂದಲ್ಲ; ಉತ್ಸವದ ಸದ್ದುಗದ್ದಲದ ಜಾತ್ರೆ ವರ್ಷಕ್ಕೊಮ್ಮೆಯಾದರೆ, ಗದ್ದಲದಾಚೆಗಿನ ಮೌನದಲ್ಲಿ ಸಾಕಾರಗೊಳ್ಳುವ ಜೀವಪರ ನಡವಳಿಕೆಗಳನ್ನು ಜನಜೀವನದ ಭಾಗವಾಗಿಸುವ ಪ್ರಯತ್ನಗಳು ನಿರಂತರವಾಗಿರಬೇಕು. ಮಠಗಳು ಜನರ ಬಳಿಗೆ ಹೋಗಿಯೋ, ಜನರನ್ನೇ ಮಠಗಳಿಗೆ ಕರೆತರುವುದರ ಮೂಲಕವೇ ಮನಸ್ಸುಗಳನ್ನು ಬೆಸೆಯುವ ಕೆಲಸ ನಡೆಯಬೇಕು. ಪ್ರತಿ ಮಠದ ಹಿಂದೆ ನಿರ್ದಿಷ್ಟ ಸಮುದಾಯವಿದ್ದರೂ, ಮಠ ತನ್ನ ಆಚರಣೆಗಳಲ್ಲಿ ಸಮುದಾಯವನ್ನು ಮೀರದೆ ಹೋದರೆ ತಾನೂ ಬೆಳೆಯುವುದಿಲ್ಲ, ಸಮಾಜವನ್ನೂ ಬೆಳೆಸುವುದಿಲ್ಲ.

ಜಾತ್ರೆಗಳಿಂದ ಒಂದು ವರ್ಗದ ವ್ಯಾಪಾರಿಗಳನ್ನು ಹೊರಗಿಡುವ ಪ್ರಯತ್ನಗಳು ನಡೆದವು. ಅದೃಷ್ಟವಶಾತ್, ಆ ಪ್ರಯತ್ನಗಳು ಮುಂದುವರೆಯಲಿಲ್ಲ ಎನ್ನುವುದು ನಮ್ಮ ಜಾತ್ರೆಗಳಲ್ಲಿ ಅಂತರ್ಗತವಾಗಿರುವ ಸ್ವೈರಣೆ ಮತ್ತು ವಿವೇಕವನ್ನು ಸೂಚಿಸುವಂತಿದೆ. ಜಾತ್ರೆ ಎನ್ನುವುದು ಜನಸಮೂಹದ ಜೀವನೋತ್ಸಾಹ ಹಾಗೂ ಸೌಂದರ್ಯವನ್ನು ಸಂಭ್ರಮಿಸುವ ಸಂದರ್ಭವೇ ಹೊರತು, ಜನರ ನಡುವೆ ಗೋಡೆಗಳನ್ನು ರೂಪಿಸುವ ನಕಾರಾತ್ಮಕ ಶಕ್ತಿಯಲ್ಲ ಎನ್ನುವ ವಿವೇಕವನ್ನು ಕನ್ನಡಿಗರು ಮರೆತಿಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಪೂರಕವಾಗಿರುವ ಜಾತ್ರೆಗಳಲ್ಲಿನ ಜೀವಪರ ಸಂಗತಿಗಳನ್ನು ಮತ್ತಷ್ಟು ಹೊಳಪುಗೊಳಿಸುವುದರ ಬಗ್ಗೆ ನಿರಂತರ ಪ್ರಯತ್ನ ನಡೆಯುವುದು ಇಂದಿನ ಅಗತ್ಯ.

■ ರಘುನಾಥ ಚ.ಹ.

ಒಂದು ಕಾಲದಲ್ಲಿ ಜನರಲ್ಲಿ ಕನಸುಗಳನ್ನು ಬಿತ್ತುವ ಕೆಲಸ ಮಾಡುತ್ತಿದ್ದ ಉತ್ಸವಗಳು, ಈಗಲೂ ತಮ್ಮ ಬಣ್ಣಗಳನ್ನು ಕಳೆದುಕೊಂಡಿಲ್ಲ. ನಿರ್ದಿಷ್ಟ ಧರ್ಮದ ಆಚರಣೆಗಳ ನಡುವೆಯೂ, ಜಾತ್ರೆಯ ಒಟ್ಟಾರೆ ಸ್ವರೂಪದಲ್ಲಿ ಧರ್ಮಾತೀತ ಸ್ವರೂಪವೊಂದು ಉಸಿರಾಡುತ್ತಿರುವ ಉದಾಹರಣೆಗಳು ನಾಡಿನಲ್ಲಿ ಸಾಕಷ್ಟಿವೆ.



ಈಶ್ವರ್